ಸಭೆ ನಡೆಸಿ ಅದಕ್ಕೆ ಪರಿಹಾರ ಜಿಲ್ಲಾ ಮಟ್ಟದಲ್ಲಿ ಮಾಡುವಂತಹ ಕೆಲಸ ಕಾರ್ಯಗಳನ್ನು ಮಾಡುತ್ತೇವೆ.

ಅಧ್ಯಕ್ಷರು: ಉತ್ತರ ಹೇಳಿದ್ದಾರೆ, ಇನ್ನು ಈ ವಿಚಾರ ಬೇಡ. ಇದರ ಬಗ್ಗೆ ಇಲ್ಲಿ ವಿಚಾರ ಮುಕ್ತಾಯವಾಗಿದೆ. ಮಾನ್ಯ ರೇವಣ್ಣನವರು.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರೆ,

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರಲ್ಲ, ಈಗಾಗಲೇ ಬಿಲ್ ಬರುತ್ತಿದೆ.

ಶ್ರೀ ಹೆಚ್. ಸಿ. ಬಾಲಕೃಷ್ಣ: ಜಲ್ಲಿ ಬಗ್ಗೆನೂ ಕೂಡ ತೀರ್ಮಾನ ತೆಗೆದುಕೊಳ್ಳಬೇಕು.

ಅಧ್ಯಕ್ಷರು: ಬಿಲ್ ಬರುತ್ತಿದೆ ಎಂದು ಹೇಳಿದ್ದಾರೆ

(ಗೊಂದಲ)

ಅಧ್ಯಕ್ಷರು: ಎಲ್ಲಾ ಸೇರಿ ಬಿಲ್ ಬರುತ್ತಿದೆ, ಚರ್ಚೆ ಮಾಡೋಣ

ಶ್ರೀ ಶಿವರಾಜ್ ತಂಗಡಗಿ: ಹೈಕೋರ್ಟಿಗೆ ತಮಿಳುನಾಡು ರೀತಿ ಮಾಡುತ್ತೇವೆಂದು ಮನವಿ ಸಲ್ಲಿಸಿದ್ದಾರೆ.

ಅಧ್ಯಕ್ಷರು: ನಾನು ಮಾನ್ಯ ರೇವಣ್ಣನವರನ್ನು ಕರೆದಿದ್ದೇನೆ. Please ಕುಳಿತುಕೊಳ್ಳಿ. ಪದವಿ ಪೂರ್ವ ಶಿಕ್ಷಕರ ವಿಚಾರ.

ಶ್ರೀ ಕೆ. ಎಂ. ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಮೊನ್ನೆ ಸದನದಲ್ಲಿ ನೀವು ಒಂದು ತೀರ್ಮಾನ ತೆಗೆದುಕೊಂಡಿದ್ದೀರಿ.

ಶ್ರೀ ಶಿವರಾಜ್ ತಂಗಡಗಿ: ಹೈಕೋರ್ಟಿಗೆ ಸಲ್ಲಿಸಿದ್ದಾರೆ ಅವರು

ಆ) ವಿಷಯ: ಶಾಸಕರಿಗೆ ಅಪಮಾನ ಮಾಡಿರುವ ಅಧಿಕಾರಿಗಳ ಬಗ್ಗೆ ಕ್ರಮ ಕೈಗೊಳ್ಳದ ಬಗ್ಗೆ

ಶ್ರೀ ಕೆ. ಎಂ. ಶಿವಲಿಂಗೇಗೌಡ: ಮಾನ್ಯ ಕಾನೂನು ಸಚಿವರು ನನಗೆ ಅವಮಾನ ಮಾಡಿದಂತಹ ಅಧಿಕಾರಿಯನ್ನು ಅಮಾನತ್ತುಗೊಳಿಸುತ್ತೇವೆಂದು ಹೇಳಿದರು. ಆದೇಶ ಬಂತು. ಆದರೆ ಇವತ್ತಿನವರೆಗೆ ಆ ಆದೇಶ ಇಂಪ್ಲಿಮೆಂಟ್ ಆಗಿಲ್ಲ.

ಶ್ರೀ ಹೆಚ್. ಡಿ. ರೇವಣ್ಣ: ಜಿಲ್ಲಾಧಿಕಾರಿಗಳು ನಾಲ್ಕು ದಿವಸವಾದರೂ ಆದೇಶವನ್ನು ಇಂಪ್ಲಿಮೆಂಟ್ ಮಾಡದೇ ಹಾಗೆಯೇ ಇಟ್ಟುಕೊಂಡಿದ್ದಾರೆ.

ಶ್ರೀ ಕೆ. ಎಂ. ಶಿವಲಿಂಗೇಗೌಡ: ಆದೇಶವನ್ನು ಇಂಪ್ಲಿಮೆಂಟ್ ಮಾಡಿಲ್ಲ. ಅವರೀಗ KAT ಗೆ ಹೋಗುತ್ತಿದ್ದಾರೆ. ನಿನ್ನೆಯ ದಿವಸ ಅವರಿಗೆ ಫಾರ್ ಆದರವರು ಹೇಳುತ್ತಿದ್ದಾರೆ, ಕೆಎಟಿ ಯಿಂದ ತಡೆಯಾಜ್ಞೆ ತರುತ್ತಿದ್ದೇವೆ. ನಿಮ್ಮ ಎಂ.ಎಲ್.ಎ. ಏನು ಮಾಡಿದ ಎಂದು ಹೇಳುತ್ತಿದ್ದಾರೆ. ನಾನು ಆತ್ಮಸಾಕ್ಷಿಯಾಗಿ ಹೇಳುತ್ತಿದ್ದೇನೆ. ಇದು ಅಗೌರವ ಆಗಿದೆ. ನಾನು ಹೇಳಿದಂತಹ ಒಂದಂಶ ಸುಳ್ಳು ಆಗಿದ್ದರೆ ನಾನು ನನ್ನ ಎಂ.ಎಲ್.ಎ. ಗಿರಿಗೆ ರಾಜೀನಾಮೆ ಕೊಟ್ಟು ಹೋಗುತ್ತೇನೆ.

(ಗೊಂದಲ)

(ಮಾನ್ಯ ಸದಸ್ಯರಾದ ಶ್ರೀ ಕೆ. ಎಂ. ಶಿವಲಿಂಗೇಗೌಡ ಅವರು ಧರಣಿ ಮಾಡಲು ಬಾವಿಗೆ ಬಂದು ಬಾವಿಯಿಂದ ಮಾತನಾಡುತ್ತಿದ್ದರು)

ಶ್ರೀ ಎಂ. ಪಿ. ರೇಣುಕಾಚಾರ್ಯ (ಮಾನ್ಯ ಅಬಕಾರಿ ಸಚಿವರು): ಮಾನ್ಯ ಅಧ್ಯಕ್ಷರೆ, ತಹಶೀಲ್ದಾರ್ ಅವರೇನೂ ತಪ್ಪು ಮಾಡಿಲ್ಲ. ಇದು ವೈಯಕ್ತಿಕ ದ್ವೇಷ. ನನಗೆ ಮಾಹಿತಿ ಇದೆ.

(ಗೊಂದಲ)

ಅಧ್ಯಕ್ಷರು: ಕುಳಿತುಕೊಳ್ಳಿ, ಉತ್ತರ ಹೇಳಲಿಕ್ಕೂ ಅವಕಾಶ ಕೊಡುವುದಿಲ್ಲ ಎಂದರೆ ಹೇಗೆ?

ಶ್ರೀ ಎಂ. ಪಿ. ರೇಣುಕಾಚಾರ್ಯ: ಯಾವುದೇ ಕಾರಣಕ್ಕೂ ತಹಶೀಲ್ದಾರ್ ಅವರನ್ನು ಸಸ್ಪೆಂಡ್ ಮಾಡಕೂಡದು. ನನಗೆ ಮಾಹಿತಿ ಇದೆ.

(ಗೊಂದಲ)

(ಈ ಹಂತದಲ್ಲಿ ಇತರ ಜೆ.ಡಿ.[ಎಸ್] ಸದಸ್ಯರುಗಳು ಬಾವಿಗೆ ಬಂದರು)

ಅಧ್ಯಕ್ಷರು:– ಈ ವರ್ತನೆ ಸರಿ ಅಲ್ಲ.

(ಗೊಂದಲ)

ಅಧ್ಯಕ್ಷರು:– ಮಾನ್ಯ ರೇಣುಕಾಚಾರ್ಯ ಅವರೇ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ:– Chief Minister was very clear. ಇವರೇಕೆ ಮಧ್ಯೆ ಇಂಟರ್ ಫಿಯರ್ ಮಾಡುತ್ತಿದ್ದಾರೆ?

(ಶ್ರೀ ಕೆ.ಎಂ. ಶಿವಲಿಂಗೇಗೌಡ ಅವರು ಹಾಗೂ ಇತರರು ಬಾವಿಯಿಂದ ಮಾತನಾಡುತ್ತಿದ್ದರು)

ಅಧ್ಯಕ್ಷರು:– ಅವರು ಉತ್ತರ ಹೇಳಲಿ.

ಶ್ರೀ ಹೆಚ್.ಸಿ. ಬಾಲಕೃಷ್ಣ:– ಆದೇಶವನ್ನು ಉಲ್ಲಂಘನೆ ಮಾಡಿದಂತಹ ಜಿಲ್ಲಾಧಿಕಾರಿಗಳ ಮೇಲೆ ನೀವು ಕ್ರಮ ತಗೆದುಕೊಳ್ಳಬೇಕು. ದಯಮಾಡಿ.

(ಶ್ರೀ ಕೆ.ಎಂ. ಶಿವಲಿಂಗೇಗೌಡ ಅವರು ಬಾವಿಯಿಂದ ಮಾತನಾಡುತ್ತಿದ್ದರು)

ಅಧ್ಯಕ್ಷರು:– ನೀವು ಏನೇ ಅಲ್ಲಿಂದ ಮಾತನಾಡಿದರೂ ಅದು ದಾಖಲೆಗೆ ಹೋಗುವುದಿಲ್ಲ, ದಯಮಾಡಿ ನಿಮ್ಮ ಸ್ಥಾನಕ್ಕೆ ಹೋಗಿ ಹೇಳಿ.

ಶ್ರೀ ಡಿ.ಕೆ. ಶಿವಕುಮಾರ್:– ಸಂಗಮೇಶ್ವರ್ issue ನೂ ತೆಗೆದುಕೊಳ್ಳಬೇಕು. ಇದು ಮುಗಿದು ಹೋಗಲಿ ಎಂದು ಸುಮ್ಮನೆ ಇದ್ದೆವು.

ಅಧ್ಯಕ್ಷರು:– ಗೌಡರೇ, ತಮ್ಮ ಸ್ಥಾನಕ್ಕೆ ಹೋಗಿ. ಅವರು ಉತ್ತರ ಹೇಳುತ್ತಾರೆ.

ಶ್ರೀ ಡಿ.ವಿ. ಸದಾನಂದ ಗೌಡ (ಮುಖ್ಯಮಂತ್ರಿಗಳು):– ಈಗಾಗಲೇ ಇದನ್ನು ಗಂಭೀರವಾಗಿ ಪರಿಗಣನೆ ಮಾಡಿ ಅವರನ್ನು suspention ಮಾಡುವಂತಹ ಕೆಲಸ ಕಾರ್ಯಗಳನ್ನು ಮಾಡಿ ಆಗಿದೆ. Order issue ಆಗಿದೆ. ಅದನ್ನು ತನಿಖೆ ಮಾಡುವಂತಹ ಕೆಲಸ ಕಾರ್ಯಗಳನ್ನೂ ಸರ್ಕಾರ ಮಾಡುತ್ತದೆ. ಆದಕಾರಣ ಯಾರೋ ಅದನ್ನು ಇದನ್ನು ಮಾತನಾಡಿದರು ಎಂದು ಹೇಳುವ ವಿಚಾರವನ್ನು ನಾವು ಗಂಭೀರವಾಗಿ ತೆಗೆದುಕೊಳ್ಳುವುದು ಬೇಡ. ಒಂದು ನಿಮಿಷ. ಸರ್ಕಾರ ಸದನದಲ್ಲಿಯೇ ಉತ್ತರ ಕೊಟ್ಟು, ಸದನದಲ್ಲಿಯೇ ಅವರನ್ನು suspention ಮಾಡುತ್ತೇವೆಂದು ಹೇಳುವಂತಹ ತೀರ್ಮಾನಗಳನ್ನು ಮಾಡಿ, ಅವರನ್ನು suspention ಮಾಡುವಂತಹ ಎಲ್ಲಾ ಕೆಲಸ ಕಾರ್ಯಗಳನ್ನು ಸರ್ಕಾರದ ವತಿಯಿಂದ ಮಾಡಲಾಗಿದೆ. ಅವರ ವಿರುದ್ಧ ಮುಂದಿನ ದಿನಗಳಲ್ಲಿ ತನಿಖೆ ಮಾಡಲಾಗುತ್ತದೆ ಮತ್ತು ಮುಂದಿನ ದಿನಗಳಲ್ಲಿ ಅದಕ್ಕೆ ಬೇಕಾದಂತಹ ಎಲ್ಲಾ ಕೆಲಸ ಕಾರ್ಯಗಳನ್ನೂ ಮಾಡಲಾಗುತ್ತದೆ. ಇದು ಸದನದಲ್ಲಿ ಕೊಟ್ಟಂತಹ ಭರವಸೆ. ಇದು ಯಾವುದೋ ಒಂದು ಮಂತ್ರಿಗಳು, ಮತ್ತೊಬ್ಬರು ಕೊಟ್ಟಂತಹ ಭರವಸೆ ಅಲ್ಲ.

ಅಧ್ಯಕ್ಷರು:– ಮಾನ್ಯ ಸಭಾ ನಾಯಕರು ಮಾತನಾಡುವುದಕ್ಕೆ ಅವಕಾಶ ಕೊಡಿ. ಅವರು ಮಾತನಾಡುವಾಗಲೂ ಅವಕಾಶ ಕೊಡದಿದ್ದರೆ ಹೇಗೆ?

ಶ್ರೀ ಡಿ.ವಿ. ಸದಾನಂದಗೌಡ:– ಆದ ಕಾರಣ ಈ ಸದನದ ಯಾವುದೇ ಶಾಸಕನಿಗೆ ಯಾವುದೇ ರೀತಿಯಲ್ಲಿ ಯಾವುದೇ ಅಧಿಕಾರಿಯಿಂದ ಆಗುವಂತಹ ಅಪಮಾನಗಳನ್ನು ಸರ್ಕಾರ ಗಂಬೀರವಾಗಿ ಪರಿಗಣಿಸುತ್ತದೆ. ಅದಕ್ಕೆ ಬೇಕಾದಂತಹ ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತದೆ. ಅದರ ಬಗ್ಗೆ ನೀವು ಯಾವುದೇ ಚಿಂತೆ ಮಾಡುವಂತಹ ಅವಶ್ಯಕತೆಗಳಿಲ್ಲ. ಅದನ್ನು ನಾವು ನೋಡಿಕೊಳ್ಳುತ್ತೇವೆ. ತಾವು ದಯವಿಟ್ಟು ತಮ್ಮ ಸ್ಥಾನಕ್ಕೆ ಹೋಗಿ. ನನ್ನಲ್ಲಿ ಮಾತನಾಡಿ. ಏನು ಮಾಡಬೇಕೋ ಆ ಕೆಲಸ ನಾನು ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, Orders issue ಆಗಿದೆ. ಅದಕ್ಕೆ ನೀವು ಕ್ರಮ ತೆಗೆದುಕೊಂಡಿದ್ದೀರಿ. ಬಹಳ ಸಂತೋಷ. ಅವರಿಗೆ ಏನು ತೊಂದರೆ ಆಗಿರುವುದು ಎಂದರೆ ಅವರು ಕೋರ್ಟಿಗೆ ಹೋಗಿ ಬಿಡುತ್ತಾರೆ, ಸ್ಟೇ ತೆಗೆದುಕೊಂಡು ಬರುತ್ತಾರೆ. ಅದಕ್ಕೋಸ್ಕರ ಇವತ್ತೇ ಅವರನ್ನು ಅಲ್ಲಿಂದ ರಿಲೀವ್ ಮಾಡಿಸುವುದಕ್ಕೆ Chief Secretaryಗೆ ಹೇಳಿ ಮಾಡಿಸಿ. ಅಲ್ಲಿನ ಡಿ.ಸಿ. ಅವರು ಮಾಡುತ್ತಿಲ್ಲ ಎನ್ನತಕ್ಕದ್ದು ಅವರ ಆರೋಪ. ಕೂಡಲೇ Chief Secretary ಗೆ ಹೇಳಿ ಅವರನ್ನು ರಿಲೀವ್ ಮಾಡಿಸಿ.

ಶ್ರೀ ಹೆಚ್.ಸಿ. ಬಾಲಕೃಷ್ಣ:– ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಕಾಳಜಿ ಈ ಸದನದ ಬಗ್ಗೆ ಸದಸ್ಯರ ಬಗ್ಗೆಇರತಕ್ಕದ್ದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ನಾಲ್ಕು ದಿವಸ ಆಗಿದೆ. ಜಿಲ್ಲಾಧಿಕಾರಿಗಳು ಇಂಪ್ಲಿಮೆಂಟ್ ಮಾಡುತ್ತಿಲ್ಲ. ಇವತ್ತು ಜಿಲ್ಲಾಧಿಕಾರಿಗಳು ಇಂಪ್ಲಿಮೆಂಟ್ ಮಾಡುತ್ತಾರೆಂದು ಹೇಳಲಿ. ಅದನ್ನು ನಾವು ಮುಖ್ಯಮಂತ್ರಿಗಳಲ್ಲಿ ಕೇಳುತ್ತಿರುವುದು.

ಅಧ್ಯಕ್ಷರು:– ಹೇಳಿದ್ದಾರಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ:– ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾವು ವಿನಂತಿ ಮಾಡತಕ್ಕದ್ದು ಜಿಲ್ಲಾಧಿಕಾರಿಗಳು ಆ ಆದೇಶವನ್ನು ಇಂಪ್ಲಿಮೆಂಟ್ ಮಾಡುತ್ತಿಲ್ಲ. ಇವತ್ತಾದರೂ ಮಾಡುತ್ತಾರಾ ಎಂದು ಹೇಳಲಿ. ಇವತ್ತೇಕೆ ಜಿಲ್ಲಾಧಿಕಾರಿಗಳು ಇವರ ಆದೇಶವನ್ನು ಜಾರಿ ಮಾಡುತ್ತಿಲ್ಲ?

ಅಧ್ಯಕ್ಷರು:– ಈಗಲೇ ಹೇಳುತ್ತಾರೆ.

(ಮಾನ್ಯ ಶ್ರೀ ಕೆ.ಎಂ. ಶಿವಲಿಂಗೇಗೌಡ ಅವರು ಹಾಗೂ ಇತರೆ ಜೆ.ಡಿ.ಎಸ್ ಸದಸ್ಯರು ಬಾವಿಯಿಂದ ಮಾತನಾಡುತ್ತಿದ್ದರು)

ಅಧ್ಯಕ್ಷರು:– ಬಾವಿಯಿಂದ ಏಕೆ ಮಾತನಾಡುತ್ತಿದ್ದೀರಿ?

(ಈ ಹಂತದಲ್ಲಿ ಧರಣಿ ನಿರತ ಸದಸ್ಯರುಗಳು ತಮ್ಮ ಸ್ಥಾನಕ್ಕೆ ಹಿಂದಿರುಗಿದರು)

ಶ್ರೀ ಹೆಚ್.ಡಿ.ರೇವಣ್ಣ:– ಮಾನ್ಯ ಅಧ್ಯಕ್ಷರೇ, ತಾಲ್ಲೂಕು ಕಚೇರಿಯ ವಿಚಾರ ಇದೆ.

ಅಧ್ಯಕ್ಷರು:– ನೀವು ಇಲ್ಲಿ ಕೊಟ್ಟಿರುವುದು ಉಪನ್ಯಾಸಕರು, ವೇತನ ತಾರತಮ್ಯದ ವಿಚಾರ.

ಇ) ವಿಷಯ:– ಪದವಿಪೂರ್ವ ಕಾಲೇಜಿನ ಶಿಕ್ಷಕರು ಸತ್ಯಾಗ್ರಹ ಮಾಡುತ್ತಿರುವ ಬಗ್ಗೆ.

ಶ್ರೀ ಹೆಚ್.ಡಿ.ರೇವಣ್ಣ:– ಮಾನ್ಯ ಸಭಾಧ್ಯಕ್ಷರೆ, ಕಳೆದ ಒಂದು ವಾರದಿಂದ ಪದವಿ ಪೂರ್ವ ಕಾಲೇಜಿನ ಶಿಕ್ಷಕರು ರಾಜ್ಯದ ಎಲ್ಲಾ ಕಡೆ ಸತ್ಯಾಗ್ರಹ ಕುಳಿತಿದ್ದಾರೆ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣನೆ ಮಾಡಿಲ್ಲವೆಂದು ಹೇಳಬೇಕಾಗುತ್ತದೆ. ಏಕೆಂದರೆ ಇನ್ನು 4–5 ತಿಂಗಳು PUC I year, II year ವಿದ್ಯಾರ್ಥಿಗಳ ಭವಿಷ್ಯವನ್ನು ಬಹುಶಃ ಸರ್ಕಾರ ಗಮನಿಸುತ್ತಿಲ್ಲ. ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರೇನು ಇವತ್ತು ಅನಿರ್ದಿಷ್ಟ ಕಾಲ ಸತ್ಯಾಗ್ರಹ ಮಾಡುತ್ತಿದ್ದಾರೆ; ಇದರ ಬಗ್ಗೆ ಸರ್ಕಾರ ಗಂಭೀರವಾಗಿ ತೆಗೆದುಕೊಂಡು ಅವರ ಬೇಡಿಕೆಯನ್ನು ಈಡೇರಿಸಬೇಕು. ಸುಮಾರು 10–12 ಬೇಡಿಕೆಯನ್ನು ಕೊಟ್ಟಿದ್ದಾರೆ, ಅದನ್ನು ಈಡೇರಿಸಬೇಕು. ಅವರಿಗೆ ತಾರತಮ್ಯ ಏನು ಇದೆ? First aid collegeಗೆ ಮತ್ತು ಇವರಿಗೆ ಬೇರೆ ರಾಜ್ಯಗಳಿಗೆ compare ಮಾಡಿದರೆ ಅಲ್ಲಿ ಹೆಚ್ಚು ಇದೆ, ಇಲ್ಲಿ ಕಡಿಮೆ ಇದೆ. ಅದನ್ನು ಕೂಡಲೆ ಸರಿ ಮಾಡಬೇಕು.

ಅಧ್ಯಕ್ಷರು:– Zero hourನಲ್ಲಿ ನೀವು ಎಲ್ಲಾ ಡೀಟೇಲ್ಸ್‌ಗೆ ಹೋದರೆ ಹೇಗೆ? ನೀವು ಪ್ರಸ್ತಾಪ ಮಾಡಿದ್ದೀರಿ.

ಶ್ರೀ ಹೆಚ್.ಡಿ. ರೇವಣ್ಣ:– ಇದನ್ನು ಕೂಡಲೆ ನೋಡಿ ಅವರಿಗೆ ಒಂದು ಪರಿಹಾರವನ್ನು ಕಂಡು ಹಿಡಿಯಬೇಕು. ವಿದ್ಯಾರ್ಥಿಗಳ ಭವಿಷ್ಯ ಒತ್ತಡದಲ್ಲಿದೆ, ಸರ್ಕಾರ ಇದನ್ನು ಗಂಭಿರವಾಗಿ ಚಿಂತನೆ ಮಾಡಬೇಕು ಎಂದು ನಾನು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ:– ನಾನೂ ಸಹ ನೋಟೀಸ್ ಕೊಟ್ಟಿದ್ದೇನೆ. ಈ ಪದವಿ ಪೂರ್ವ ಕಾಲೇಜಿನ ಶಿಕ್ಷಕರು ಇದ್ದಾರಲ್ಲ ಅವರು ಇದು ಮೂರನೇ ಸಲವೋ, ನಾಲ್ಕನೇ ಸಲವೋ ಚಳುವಳಿ ಮಾಡುತ್ತಿರುವುದು. ಪದೇ ಪದೇ ಅವರು ಚಳುವಳಿ ಮಾಡಿದಾಗಲೆಲ್ಲಾ ಅವರ